


ಫೋರ್ಟ್ ವರ್ತ್‌ನ ಅಸ್ಮಿತೆಯೇ ಆಗಿರುವ ಉದ್ದ ಕೊಂಬಿನ ಜಾನುವಾರುಗಳು


ಸ್ಮಾರಕ ಕೇಂದ್ರ' ಹಾಗೂ 'ಕಾಸಾ ಮನಾನಾ' ಚಿತ್ರಮಂದಿರಗಳನ್ನು ತೆರೆಯುವುದರೊಂದಿಗೆ ಇದೊಂದು ಅಂತರರಾಷ್ಟ್ರೀಯ ಖ್ಯಾತಿ ಗಳಿಸಿದ ನಗರವಾಯಿತು. ಮುಂದೆ ಈ ಸ್ಟಾಕ್‌ಯಾರ್ಡ್ ಕಂಪೆನಿಯನ್ನು ಉತ್ತರಕ್ಕೂ ದಕ್ಷಿಣಕ್ಕೂ ವಿಸ್ತರಿಸಲಾಯಿತು. ಉತ್ತಮ ಸೌಕರ್ಯಗಳುಳ್ಳ ದೊಡ್ಡಿಗಳನ್ನು, ಪ್ರಾಣಿ ಸಂರಕ್ಷಣಾ ಕಟ್ಟಡಗಳನ್ನು ಕಟ್ಟಿಸಲಾಯಿತು.

ಇಷ್ಟಲ್ಲದೆ, ಈಗಿರುವ 'ಲೈವ್ ಸ್ಟಾಕ್ ಎಕ್ಸ್‌ಚೇಂಜ್' ಕಟ್ಟಡದ ನಿರ್ಮಾಣವೂ ಆಯಿತು. ಈ ಭವನದಲ್ಲಿ ದೇಶದ ಎಲ್ಲೆಡೆಗಳಿಂದ ಜಾನುವಾರುಗಳನ್ನು (ಹಸು, ಎತ್ತು, ಎಮ್ಮೆ, ಕೋಣ, ಹಂದಿ, ಕುರಿ, ಮೇಕೆ, ಟಗರು ಮುಂತಾದುವು) ತರಿಸಿ ಮಾರಾಟ ಆರಂಭವಾಯಿತು. ಅದಕ್ಕೆ ಪೂರಕವಾದ ರೈಲ್ವೆ, ಅಂಚೆ ಮತ್ತು ತಂತಿ ಕಚೇರಿಗಳು ಹಾಗೂ ಇತರ ವ್ಯವಹಾರಗಳನ್ನೂ ನಡೆಸುವ ಕಚೇರಿಗಳು ತೆರೆದುಕೊಂಡವು. ಕ್ರಮೇಣ ಇದನ್ನು 'ಪಶ್ಚಿಮದ ವಾಲ್‌ಸ್ಟ್ರೀಟ್' ಎಂದು ಕರೆದರು. ಈ ಎಲ್ಲ ಬೆಳವಣಿಗೆಗಳಿಂದಾಗಿ ಸುತ್ತಮುತ್ತ ಇದ್ದ ಸಣ್ಣಪುಟ್ಟ ಊರುಗಳೆಲ್ಲ ಸಂಪದ್ಭರಿತವಾಗಿ ಫೋರ್ಟ್ ವರ್ತ್‌ಗೇ ಸೇರಿಹೋದುವು.

ಪ್ರಥಮ ಜಾಗತಿಕ ಯುದ್ಧದ ಸಮಯದಲ್ಲಿ ಈ ಸ್ಟಾಕ್‌ಯಾರ್ಡ್ ಸಂಸ್ಥೆಯ ಕುದುರೆ ಮತ್ತು ಹೇಸರಗತ್ತೆಗಳಿಗೆ ತುಂಬಾ ಬೇಡಿಕೆ ಇತ್ತಂತೆ. ಯುದ್ಧದ ಅವಶ್ಯಕತೆಗಳಿಗಾಗಿ ಈ ಪ್ರಾಣಿಗಳನ್ನು ಅಧಿಕ ಸಂಖ್ಯೆಯಲ್ಲಿ ಒದಗಿಸಲು ಸಂಸ್ಥೆಗೆ ಸಾಧ್ಯವೂ ಆಗಿತ್ತು. ಆದರೆ ಎರಡನೇ ಜಾಗತಿಕ ಯುದ್ಧ ಮುಗಿಯುವಾಗ ದೇಶದ ಎಲ್ಲೆಡೆ ಸದೃಢ ಹೆದ್ದಾರಿಗಳ ನಿರ್ಮಾಣವಾಗಿ, ಭಾರೀ ಗಾತ್ರದ ಟ್ರಕ್ಕುಗಳು ಓಡಾಡಲಾರಂಭಿಸಿದುವು. ಜಾನುವಾರುಗಳ ಸಂತೆಗಳೂ, ವ್ಯಾಪಾರದ ಸಂಸ್ಥೆಗಳೂ ದೇಶದ ಎಲ್ಲಾ ಕಡೆ ತಲೆಯೆತ್ತಿದುವು. ಮಾಂಸ ಪರಿಷ್ಕರಣೆ ಹಾಗೂ ಶೇಖರಣಾ ಕೇಂದ್ರಗಳು ಕೂಡ ಎಲ್ಲೆಡೆ ತೆರೆಯಲಾದವು. ಅಲ್ಲಿಂದ ಫೋರ್ಟ್ ವರ್ತ್ ಸ್ಟಾಕ್‌ಯಾರ್ಡ್ ಸಂಸ್ಥೆಯ ಅವನತಿ ಆರಂಭವಾಯಿತು. ಇಲ್ಲಿರುವ ಪ್ರಮುಖ ಕಾರ್ಖಾನೆಗಳು ಮುಚ್ಚಲ್ಪಟ್ಟವು.

## ಮಾಯವಾದ ಕೌಬಾಯ್‌ಗಳು

1976ರಲ್ಲಿ 'ಉತ್ತರ ಫೋರ್ಟ್ ವರ್ತ್ ಚಾರಿತ್ರಿಕ ಸಂಘ' ಸ್ಥಾಪಿತವಾಯಿತು. ಫೋರ್ಟ್ ವರ್ತ್ ನಗರದ ಹಳೆಯ 'ಜಾನುವಾರು ಪರಂಪರೆ'ಯನ್ನು ಶಾಶ್ವತವಾಗಿ ಉಳಿಸುವ ಪ್ರಯತ್ನಕ್ಕೆ ಈ ಸಂಸ್ಥೆ ತೊಡಗಿತು. ಅಲ್ಲಿರುವ ಪುರಾತನ ಕಟ್ಟಡಗಳ ಬಾಹ್ಯ ರೂಪಗಳನ್ನು ಹಾಗೇ ಉಳಿಸಿ ಅವುಗಳ ಒಳಗೆ ಅಂಗಡಿಗಳು, ಹೋಟೆಲ್‌ಗಳು, ಮನರಂಜನಾ ಕೇಂದ್ರಗಳನ್ನು ತೆರೆಯಲಾಯಿತು. ಈಗ ಫೋರ್ಟ್ ವರ್ತ್ ನಗರದಲ್ಲಿ ಆಧುನಿಕ ಶೈಲಿಯ ಗಗನಚುಂಬಿ ಕಟ್ಟಡಗಳು, ಜತೆಜತೆಯಲ್ಲಿ ಹಳೆಯ ಕಾಲದ ಕೆಂಪು ಇಟ್ಟಿಗೆಯ ಕಟ್ಟಡಗಳೂ ಸುಸ್ಥಿರವಾಗಿ ಉಳಿದಿವೆ.




ಫೋರ್ಟ್ ವರ್ತ್‌ನ ಗರಿ ಸ್ಟಾಕ್ ಎಕ್ಸ್‌ಚೇಂಜ್ ಕಟ್ಟಡ

1980ರಲ್ಲಿ ನಗರದ ಡೌನ್‌ಟೌನನ್ನು ಪುನರುಜ್ಜೀವನ ಮಾಡುವುದರೊಂದಿಗೆ 'ಸನ್‌ಡಾನ್ಸ್ ಸ್ಕ್ವೇರ್' ಎಂಬ 37 ಬ್ಲಾಕುಗಳ ವಾಣಿಜ್ಯ ಹಾಗೂ ವಸತಿ ಸಮುಚ್ಚಯ ನಿರ್ಮಿಸಲಾಯಿತು. ಒಂದು ಸಮುದಾಯ ಭವನದ ನಿರ್ಮಾಣವಾಯಿತು. ಸರ್ಕಾರಿ ಕಚೇರಿಗಳು, ಫಲಾಹಾರ ಮಂದಿರಗಳು, ಸಿನಿಮಾ ಥಿಯೇಟರ್‌ಗಳು ತಲೆಯೆತ್ತಿದವು. ಕೌಬಾಯ್‌ಗಳು ಮಾಯವಾದರು. ಬದಲಿಗೆ, ಕೌಬಾಯ್‌ಗಳ ಕಥೆಗಳು ರೋಚಕ ಸಿನಿಮಾಗಳಾದುವು.

ಕ್ಲೈಂಟ್ ಈಸ್ಟ್‌ವುಡ್, ಮಾರ್ಲನ್ ಬ್ರಾಂಡೋ ಮುಂತಾದ ನಟರು ನಟಿಸಿದ 'ಗುಡ್ ಬ್ಯಾಡ್ ಅಂಡ್ ಅಗ್ಲಿ', 'ದ ಮ್ಯೂಲ್', 'ಎ ಫಿಸ್ಟ್‌ಫುಲ್ ಆಫ್ ಡಾಲರ್ಸ್', 'ಸನ್‌ಡಾನ್ಸ್ ಕಿಡ್' ಮುಂತಾದ ಚಲನಚಿತ್ರಗಳು ದೇಶದಾದ್ಯಂತ ತುಂಬಾ ಜನಪ್ರಿಯವಾದುವು. ನಗರವು ಕಳೆಗಟ್ಟಿತು, ಅಲ್ಲದೆ ವಾಣಿಜ್ಯ ಕೇಂದ್ರವಾಗಿ ಪರಿವರ್ತಿತವಾಯಿತು.

ಲೈವ್‌ಸ್ಟಾಕ್ ಎಕ್ಸ್‌ಚೇಂಜ್ ಕಟ್ಟಡದಿಂದ ಅನತಿ ದೂರದಲ್ಲಿ 'ಸ್ಟಾಕ್‌ಯಾರ್ಡ್ ಸ್ಟೇಷನ್' ಇದೆ. ಅದೊಂದು ವಿಶಾಲ ರೈಲು ನಿಲ್ದಾಣ. ಅಲ್ಲಿ ಆಗಾಗ ದೊಡ್ಡದೊಂದು ಉಗಿಬಂಡಿ ಬರುತ್ತದೆ. ಹಿಂದೆ ಪಶುಗಳನ್ನು ಸಾಗಿಸುತ್ತಿದ್ದ ಈ ಬಂಡಿಗಳು ಈಗ ಪ್ರವಾಸಿಗರ ವಿಹಾರಕ್ಕಾಗಿ ಮೀಸಲಾಗಿವೆ. ಇನ್ನೊಂದು ಟ್ರಾಮ್–ಟೂರ್ ಇದೆ. ಕುದುರೆ ಸವಾರಿ, ದೊಡ್ಡಕೊಂಬಿನ ಎತ್ತಿನ ಮೇಲೆ ಸವಾರಿ ಇದೆ. ವಿವಿಧ ಜಾನುವಾರುಗಳು ಶಿಸ್ತಿನಿಂದ ನಡೆಯುವ ಪರೇಡ್ ಮನಸೆಳೆಯುತ್ತದೆ. ಇನ್ನು, ಆ ಕಾಲದಲ್ಲಿ, ಪ್ರಯಾಣಿಕರ ಹಾಗೂ ಜಾನುವಾರುಗಳ ಮೇಲೆ ದಾಳಿ ಮಾಡಿ ಗುಂಡು ಹಾರಿಸಿ ಕಾದಾಡುತ್ತಿದ್ದ ಕೌಬಾಯ್‌ಗಳ ಕಾಳಗಗಳನ್ನು ಪ್ರವಾಸಿಗರಿಗೆ ಅಭಿನಯಿಸಿ ತೋರಿಸುತ್ತಾರೆ. ಅವರ ನಾಟಕ, ಅಭಿನಯಗಳು ತುಂಬಾ ನೈಜವಾಗಿವೆ. ಇವನ್ನೆಲ್ಲಾ ವೀಕ್ಷಿಸುತ್ತ ನಮಗೆ ಸಮಯ ಜಾರಿದುದೇ ಗೊತ್ತಾಗಲಿಲ್ಲ.

ಫೋರ್ಟ್ ವರ್ತ್ ನಗರ ಮಧ್ಯ ಅಮೆರಿಕದಲ್ಲಿ ನೋಡಲೇಬೇಕಾದ ಒಂದು ವಿಭಿನ್ನ, ಹಾಗೆಯೇ ಚಾರಿತ್ರಿಕ ಮಹತ್ವವುಳ್ಳ ಪ್ರವಾಸಿ ತಾಣ.

ಪ್ರತಿಕ್ರಿಯಿಸಿ: feedback@sudha.co.in